ಅ.ದಾವೆ.ಸಂಖ್ಯೆ: 30/2022
ಪಿಡಬ್ಲ್ಯೂ-1

ದಿನಾಂಕ: 10.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎ ಎನ್ ಟಿ ವಕೀಲರಿಂದ,

ಪ್ರಸ್ತುತ ನಾನು ಸಲ್ಲಿಸಿದ ದಾವೆಯ ದಾವಾ ಆಸ್ತಿಯ ಸೈಟ್ ನಂಬರ್ ನೆನಪಿರುವುದಿಲ್ಲ. ಸೈಟ್ ನಂಬರ್ ಬದಲಾವಣೆ ಆಗಿ 3-4 ವರ್ಷಗಳು ಆಗಿರುತ್ತವೆ. ದಾವಾ ಸಲ್ಲಿಸುವಾಗ ಹೊಸ ಸೈಟ್ ನಂಬರ್ ಇತ್ತು ಎಂದರೆ ಸರಿ. ಹೊಸ ಸೈಟ್ ನಂಬರ್ ನಮೂದಿಸುವ ಮೊದಲು ಹಳೇ ಸೈಟ್ ನಂಬರನ್ನು ಯಾವ ಕಾರಣಕ್ಕಾಗಿ ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ಸಾಗುವಳಿ ಚೀಟಿ ಪ್ರಕಾರ ಸೈಟ್ ನಂಬರ್ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ದಾವೆ ಸಲ್ಲಿಸುವಾಗ ಹೊಸ ಸೈಟ್ ನಂಬರ್ ನ ದಾಖಲೆಯನ್ನು ದಾವಾದ ಜೊತೆ ಸಲ್ಲಿಸಿದ್ದೆ ಎಂದರೆ ಸರಿ. ಹಳೇ ಸೈಟ್ ನಂಬರ್ ನಿಂದ ಹೊಸ ಸೈಟ್ ನಂಬರ್ ಹೇಗೆ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಹೊಸ ಸೈಟ್ ನಂಬರ್ ಮಾಡಿದ ಬಗ್ಗೆ ಇಒ ರವರ ಮುಂದೆ ಅರ್ಜಿ ಸಲ್ಲಿಸಿರುತ್ತೇನೆ. ಪ್ರಕರಣ ಸಂಖ್ಯೆ ನನಗೆ ಗೊತ್ತಿರುವುದಿಲ್ಲ.

ನಿಪಿ-2 ದಾಖಲೆಗೆ ನನ್ನ ತಕರಾರು ಇರುವುದಿಲ್ಲ. ನಿಪಿ-2 ಮತ್ತು ಹಕ್ಕು ಪತ್ರದಲ್ಲಿರುವ ಸ್ವತ್ತುಗಳು ಒಂದೇ ಆಗಿರುತ್ತವೆ ದಾವೆ ಸಲ್ಲಿಸುವಾಗ ಸೈಟ್ ನಂಬರ್ ಬದಲಾವಣೆ ಆದ ಬಗ್ಗೆ ಹೇಳಲು ತೊಂದರೆ ಇರಲಿಲ್ಲ. ಹಕ್ಕು ಪತ್ರವನ್ನು 2001 ರಲ್ಲಿ ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2001 ರಲ್ಲಿ ನನಗೆ ಕೊಟ್ಟ ಹಕ್ಕು ಪತ್ರದ ಜೊತೆಗೆ ಉಳಿದ 419 ಜನರಿಗೆ ಕೊಟ್ಟ ಹಕ್ಕು ಪತ್ರವನ್ನು ರದ್ದು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಪತ್ರ ಪಡೆದವರು ಊರಿನಲ್ಲಿ ಇರವುದಿಲ್ಲ ಹಕ್ಕು ಪತ್ರ ಪಡೆದವರು ಸ್ವಾಧಿನದಲ್ಲಿ ಇರುವುದಿಲ್ಲ ಹಾಗೂ ಹಕ್ಕು ಪತ್ರ ಪಡೆದವರ ಬದಲಾಗಿ ಬೇರೆಯವರು ಸ್ವಾಧೀನದಲ್ಲಿ ಇರುತ್ತಾರೆ ಎಂಬ 3 ಕಾರಣಗಳಿಗಾಗಿ

ಹಕ್ಕುಪತ್ರ ವನ್ನು ರದ್ದು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ನಂತರ ಪಂಚಾಯಿತಿಯವರು ಠರಾವು ಮಾಡಿ ಸ್ವಾಧೀನದಲ್ಲಿರುವವರಿಗೆ ಪುನಃ ಹಕ್ಕು ಪತ್ರ ವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ

ಪ್ರಸ್ತುತ ಸೈಟ್ ನಂಬರ್ 324 ರಲ್ಲಿ ನಾನು ಮನೆ ಕಟ್ಟಿಕೊಂಡು ವಾಸವಿರುತ್ತೇನೆ. ಪ್ರಸ್ತುತ ದಾವಾ ಆಸ್ತಿಯ ಸೈಟ್ ನಂಬರ್ ನನಗೆ ಗೊತ್ತಿರುವುದಿಲ್ಲ. ಉಮಾ ಎನ್ನುವವರು ನನ್ನ ಹೆಂಡತಿ. ನನ್ನ ಹೆಂಡತಿಯರ ಹೆಸರಿನಲ್ಲಿ ಸೈಟ್ ಇರುವುದಿಲ್ಲ. ಸೈಟ್ ನಂಬರ್ 312 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಸೈಟ್ ನಂಬರ್ 349 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಸೈಟ್ ನಂಬರ್ 312 ನನ್ನ ಹೆಂಡತಿ ಉಮಾರಿಗೆ ಸಂಬಂಧಪಟ್ಟದ್ದು ಎಂದರೆ ಸರಿ. ಸೈಟ್ ನಂಬರ್ 312 ರ ವಿಸ್ತೀರ್ಣ 30 ಇಂಟು 40 ಅಡಿ ಎಂದರೆ ಸರಿ. ಸೈಟ್ ನಂಬರ್ 349 ಸಂತೋಷ ಕುಮಾರರವರ ಹೆಸನರಿಲ್ಲಿದೆ ಎಂದರೆ ಸರಿ. ಸದರಿ ಸೈಟ್ ನ ವಿಸ್ತೀರ್ಣ 30 ಇಂಟು 40 ಅಡಿ ಎಂದರೆ ಸರಿ. ನನ್ನ ಹೆಂಡತಿ ಮತ್ತು ಪ್ರತಿವಾದಿ 1 ರವರು ಸೈಟ್ ನಂ. 349 ಮತ್ತು 312 ರಲ್ಲಿ ಅವರವರ ಸ್ವಾಧೀನ ಅನುಕೂಲಕ್ಕೆ ಸಂಬಂಧಿಸಿದಂತೆ ಒಪ್ಪಿಗೆ ಪತ್ರ ವನ್ನು ಪಂಚಾಯಿತಿಗೆ ಬರೆದುಕೊಟ್ಟು ಖಾತೆಯನ್ನು ಬದಲಾಯಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಅದಲು ಬದಲು ದಿಃ 14.06.2006 ನೇ ಇಸವಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಅಂದಿನಿಂದ ಸೈಟ್ ನಂಬರ್ 349 ರಲ್ಲಿ ನನ್ನ ಹೆಂಡತಿ ಇದ್ದು ಅವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸೈಟ್ ನಂ. 312 ರಲ್ಲಿ 1 ನೇ ಪ್ರತಿವಾದಿ ಇದ್ದು ಅವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ .

ನಾನು ಸಲ್ಲಿಸಿದ 349 ಕ್ಕೆ ಸಂಬಂಧಿಸಿದ ದಾಖಲೆಗಳು ನನ್ನಹೆಂಡತಿಯರ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ಹೆಂಡತಿಯ ಸ್ವಾಧೀನಕ್ಕೆ ನಾನು ತೊಂದರೆ ನೀಡಿರುವುದಿಲ್ಲ. ಅವರ ವಿರುದ್ಧ ನಾನು ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ನನ್ನ ಹೆಂಡತಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯ ಪ್ರಸ್ತುತ ಮಾಲೀಕತ್ವ ನನ್ನ ಹೆಂಡತಿಗೆ ಇದೆ ಎಂದರೆ ಸರಿ . ಮೂಲ ದಾಖಲೆಗಳು ನನ್ನ ಹೆಸರಿನಲ್ಲಿ ಇದ್ದ ಕಾರಣ ನಾನು ಈ ಪ್ರಕರಣವನ್ನು

ಸಲ್ಲಿಸಿರುತ್ತೇನೆ. ಮೂಲ ಖಾತೆ ರದ್ದು ಆಗಿರುವ ವಿಚಾರ, ಪ್ರಸ್ತುತ ದಾವಾ ಆಸ್ತಿ ನನ್ನ ಹೆಂಡತಿಯ ಹೆಸರಿನಲ್ಲಿ ಇರುವ ವಿಚಾರ ದಾವೆ ಸಲ್ಲಿಸುವಾಗ ನನಗೆ ಗೊತ್ತಿತ್ತು ಎಂದರೆ ಸರಿ. ನಿಪಿ-8 ದಾಖಲೆಗೆ ನನ್ನ ಹೆಂಡತಿಯ ಒಪ್ಪಿಗೆ ಇತ್ತು. ಆದರೆ ನಿಪಿ-8 ಕ್ಕೆ ನನ್ನ ಹೆಂಡತಿ ಸಹಿ ಮಾಡಿರುವುದಿಲ್ಲ. ನನ್ನ ಹೆಂಡತಿ ಪ್ರತ್ಯೇಕವಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಆರ್ ಕೆ ಜಿ ಎಸ್ ವಕೀಲರಿಂದ
2 ನೇ ಪ್ರತಿವಾದಿ ಹಾಗೂ ವಕೀಲರು ಗೈರು ಹಾಜರಿದ್ದು ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸದೇ ಇಲ್ಲದಿರುವ ಕಾರಣ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

(ಮರು ವಿಚಾರಣೆ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

2 ನೇ ಅಪರ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.